**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
ಸಿಸಿ ನಂಬರ್ **31/2023**

ಫಿರ್ಯಾದಿ ಸರಕಾರ (ಹಾವೇರಿ ಶಹರ ಪೊಲೀಸ ಠಾಣೆ).

ವಿರುದ್ದ

ಆರೋಪಿ **1.** ಸುರೇಶ ಸಿದ್ದಪ್ಪ ಸೊಪ್ಪಿನ
ವಯಾಃ **33** ವರ್ಷ, ಉದ್ಯೋಗಃ ಕೃಷಿ
ಸಾಃ ಗಣಜೂರ ತಾಃಜಿಃ ಹಾವೇರಿ.

**2.** ನಾಗಪ್ಪ @ ನಾಗರಾಜ ಪಸಾರಿ
ವಯಾಃ **31** ವರ್ಷ, ಉದ್ಯೋಗಃ ಕೃಷಿ
ಸಾಃ ಗಣಜೂರ, ತಾಃಜಿಃ ಹಾವೇರಿ

**:ದೋಷಾರೋಪಣೆ:**

ಇದರಲ್ಲಿ ಶ್ರೀ ಪ್ರಕಾಶ.ವಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತನಾದ ನಿನ್ನ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ದಿನಾಂಕಃ 12.09.2022 ರಂದು ಮಧ್ಯಾಹ್ನ 2-00 ಘಂಟೆಯ ಸುಮಾರಿಗೆ ಹಾವೇರಿ ತಹಶೀಲ್ದಾರ ಕಛೇರಿಯಲ್ಲಿ ಆರೋಪಿತರಾದ ನೀವು ಚಾ.ಸಾ-6 ಮತ್ತು 7 ರವರೊಂದಿಗೆ ಗಲಾಟೆ ಮಾಡಿ, 1 ನೇ ಆರೋಪಿಯಾದ ನೀನು ಚಾ.ಸಾ-7 ರವರ ಎದೆಯ ಮೇಲಿನ ಅಂಗಿಯನ್ನು ಹಿಡಿದು ಮುಖಕ್ಕೆ, ಗಲ್ಲಕ್ಕೆ, ಕೈಯಿಂದ ಗುದ್ದಿದ್ದು ಹಾಗೂ 2 ನೇ ಆರೋಪಿಯಾದ ನೀನು ಚಾ.ಸಾ-7 ನೇದವರಿಗೆ ಕಾಲಿನಿಂದ ಒದ್ದು, ಕೆಳಕ್ಕೆ ಬಿಳಿಸಿ ಚಾ.ಸಾ-7 ರವರ ಬಲಕಾಲ ತೊಡೆಯ ಮೇಲೆ ನಿಂತು ತುಳಿದಾಡಿ ಸಾದಾ ಮತ್ತು ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ.325 ಸಹವಾಚಕ 34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಯಾವುದೋ ಒಂದು ಅಪರಾಧ ಕೃತ್ಯ ಎಸಗುವ ಉದ್ದೇಶದಿಂದ 2 ನೇ ಆರೋಪಿಯಾದ ನೀನು ಹಿರೋ ಹೊಂಡಾ ಬೈಕ ನಂಬರಃ ಕೆಎ-27/ಎಕ್ಸ-6357 ನೇದರಲ್ಲಿ ಚಾ.ಸಾ-6 ರವರನ್ನು ಹತ್ತಿಸಿಕೊಂಡು ಅಪಹರಣ ಮಾಡಿಕೊಂಡು ಹೋಗಿ ನಂತರ ಚಾ.ಸಾ-

10 ರವರ ಕಾರ ನಂಬರಃ ಕೆಎ-27/ಎನ್-7654 ನೇದ್ದರಲ್ಲಿ ಚಾ.ಸಾ-6 ನೇದವರನ್ನು ಹತ್ತಿಸಿಕೊಂಡು ದೇವಗಿರಿ, ಮನ್ನಂಗಿ ಮಾರ್ಗವಾಗಿ ಸವಣೂರ ತಾಲೂಕಾ ಜಲ್ಲಾಪುರ ಗ್ರಾಮಕ್ಕೆ ಕರೆದುಕೊಂಡು ಹೋಗಿ ಜಲ್ಲಾಪುರ ಗ್ರಾಮದಲ್ಲಿ ಚಾ.ಸಾ-11 ರವರ ಮನೆಯಲ್ಲಿ ಇಟ್ಟಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ.363 ಸಹವಾಚಕ 34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಅಪರಾಧ ಕೃತ್ಯ ಎಸಗುವ ಉದ್ದೇಶದಿಂದ ಚಾ.ಸಾ-6 ರವರನ್ನು ಅಪಹರಣ ಮಾಡಿ, ಚಾ.ಸಾ-11 ರವರ ಮನೆಯಲ್ಲಿ ಅಕ್ರಮ ಬಂದನದಲ್ಲಿಟ್ಟಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ. 342 ಸಹವಾಚಕ 34** ರ **ಅಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದಿಗೆ ಮತ್ತು ಚಾ.ಸಾ-7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ 34** ರ **ಅಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದಿ ಮತ್ತು ಚಾ.ಸಾ-7 ರವರಿಗೆ ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವದಿಲ್ಲ ಅಂತಾ ಪ್ರಾಣ ಬೆದರಿಕೆ ಹಾಕಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ. 506 ಸಹವಾಚಕ 34** ರ **ಅಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೇಲೆ ಹೇಳಿದ ದೋಷಾರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 31-10-2023.

(ಪ್ರಕಾಶ.ವಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
ಸಿಸಿ ನಂಬರ್ **31/2023**
ದಿನಾಂಕಃ **31.10.2023.**

ಫಿರ್ಯಾದಿ **ಸರಕಾರ (ಹಾವೇರಿ ಶಹರ ಪೊಲೀಸ ಠಾಣೆ).**
ವಿರುದ್ದ

ಆರೋಪಿ **1.** ಸುರೇಶ ಸಿದ್ದಪ್ಪ ಸೊಪ್ಪಿನ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

**ಉತ್ತರಃ**

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

**ಉತ್ತರಃ**

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

ಆರೋಪಿತನ ಸಹಿ:

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
ಸಿಸಿ ನಂಬರ್ **31/2023**
ದಿನಾಂಕಃ **31.10.2023.**

ಫಿರ್ಯಾದಿ **ಸರಕಾರ (ಹಾವೇರಿ ಶಹರ ಪೊಲೀಸ ಠಾಣೆ).**
ವಿರುದ್ದ

ಆರೋಪಿ **2.** ನಾಗಪ್ಪ @ ನಾಗರಾಜ ಪಸಾರಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

**ಉತ್ತರಃ**

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

**ಉತ್ತರಃ**

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

ಆರೋಪಿತನ ಸಹಿ: